# ಶಾಂತಿನಾಥ ದೇಸಾಯಿ ಅವರ ಕಾದಂಬರಿಗಳ ವಸ್ತು ಮತ್ತು ತಂತ್ರ.

**ಧನಲಕ್ಷ್ಮಿ ಸಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನೆಲಮಂಗಲ, ಬೆಂಗಳೂರು ಗ್ರಾಮಾಂತರ.

**Article Link: https://aksharasurya.com/2023/09/dhanalakshmi-c-2/**

## ABSTRACT:

ಶಾಂತಿನಾಥ ದೇಸಾಯಿಯವರು ಪ್ರಮುಖವಾಗಿ ಮನುಷ್ಯನ ಅಸ್ತಿತ್ವದ ಹುಡುಕಾಟ, ಮುಕ್ತಿಯ ಹಂಬಲ, ಆಧುನಿಕತೆಯ ಯಾಂತ್ರಿಕತೆಯಲ್ಲಿ ವಿಕ್ಷಿಪ್ತಗೊಳ್ಳುವ ಯುವಕರ ಮನಸ್ಸು, ಸಂಬಂಧಗಳ ಅಗತ್ಯತೆ, ಗಂಡು – ಹೆಣ್ಣಿನ ಸಂಬಂಧದ ಸ್ವರೂಪ, ವೈಯಕ್ತಿಕ ಹುಡುಕಾಟದೊಂದಿಗೆ ಮನುಷ್ಯ ಸಾಮಾಜಿ–ಕತೆಯೊಂದಿಗೆ ಬೆಸೆದುಕೊಳ್ಳುವ ರೀತಿ, ವ್ಯಕ್ತಿಯ ಅಂತರಾಳದ ಮೂಲಕ ವ್ಯಕ್ತಿತ್ವ ಹಾಗೂ ತತ್ವಗಳು ಮಂಥನಗೊಳ್ಳುವ ಬಗೆ–ಈ ವಸ್ತುಗಳನ್ನು ತಮ್ಮ ಕಾದಂಬ–ರಿಗಳ ರಚನೆಯಲ್ಲಿ ಬಳಸಿಕೊಂಡಿದ್ದಾರೆ. ಇವರ ಕಾದಂಬರಿಯ ವಸ್ತುಗಳು ಸೂಕ್ಷ್ಮ ಸಂವೇದನೆಯ ಓದುಗರನ್ನು ಆಳವಾಗಿ ಪ್ರಭಾವಿಸಬಲ್ಲವು. ಆಧುನಿಕತೆಯ ಪರಿಧಿಯಲ್ಲಿ ಬದುಕುತ್ತಿರುವ ನಮಗೆ ಇಂದು ದೇಸಾಯಿಯವರ ಕಾದಂಬ–ರಿಯ ವಸ್ತುಗಳು ನಾವು ಅಥವಾ ನಮ್ಮ ಸುತ್ತಲಿನ ವ್ಯಕ್ತಿಗಳು ಅನುಭವಿಸುತ್ತಿರುವ ಯಾತನೆ, ಬೇಸರ, ಗೊಂದಲ, ಭ್ರಮನಿರಸನ, ಅಸಹಾಯಕತೆ ಇವುಗಳಿಗೆ ಹಿಡಿದ 'ಕಲಾತ್ಮಕವಾದ ಕನ್ನಡಿ' ಎಂದು ಅನ್ನಿಸಿದರೆ ಅದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ದೇಸಾಯಿ ಅವರ ಕಾದಂಬರಿಗಳಲ್ಲಿ ಪ್ರಮುಖವಾಗಿ ಮೂರು ತಂತ್ರಗಳನ್ನು ಗುರುತಿಸಬಹುದು. ಪ್ರಜ್ಞಾಪ್ರವಾಹತಂತ್ರ, ದಿನಚರಿ ಬರೆಯುವ ತಂತ್ರ, ಪತ್ರಗಳ ಮೂಲಕ ಸಂಭಾಷಣೆ.

## KEYWORDS:

ಅನಾಥಪ್ರಜ್ಞೆ, ಅಸಹಾಯಕತೆ, ಆಧುನಿಕತೆ, ಯಾಂತ್ರಿಕತೆ, ಪ್ರಜ್ಞಾಪ್ರವಾಹತಂತ್ರ.

ವಸ್ತುನಿಷ್ಠ ಬರವಣಿಗೆ, ಭಾಷೆಯ ಸೂಕ್ಷ್ಮಬಳಕೆ, ಹೊಸ ತಂತ್ರವನ್ನು ರೂಪಿಸಿಕೊಳ್ಳುವ ರೀತಿ, ಇವು ನವ್ಯ ಸಾಹಿತ್ಯ ರಚನೆಯ ಸಂದರ್ಭದಲ್ಲಿ ಕಂಡುಬರುವ ಪ್ರಮುಖ ಅಂಶಗಳು. ನವ್ಯ ಕೃತಿಗಳು ತಮ್ಮ ಸ್ವರೂಪ, ವಸ್ತುವಿಶೇಷತೆ, ತಂತ್ರದ ನವೀನತೆ ಹಾಗೂ ತಾಜಾತನಗಳಿಂದಾಗಿ ಓದುಗರ ಮನಸ್ಸನ್ನು ಸೆಳೆಯುತ್ತವೆ. ಬದುಕಿನ ಹೊಸ ಅರ್ಥವಂತಿಕೆ, ಹೊಸ ನಾಗರಿಕತೆಯ ಆಗಮನದ ಪ್ರಭಾವ,

ವ್ಯಕ್ತಿಯ ಒಂಟಿತನದ ನೋವು, ಅಸಹಾಯಕತೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ಬಹುತೇಕ ಎಲ್ಲಾ ನವ್ಯ ಬರಹಗಾರರು ಪ್ರಯತ್ನಿಸಿದ್ದಾರೆ.

ನವ್ಯ ಕಾದಂಬರಿಕಾರರು ತಾವು ಆರಿಸಿಕೊಂಡ ಕಥಾ ವಸ್ತುವನ್ನು ನಿರೂಪಿಸುವ ರೀತಿಯ ಬಗ್ಗೆಯೂ ಸೂಕ್ಷ್ಮವಾಗಿ ಯೋಚಿಸಿ ಅದಕ್ಕೆ ತಕ್ಕುದಾದ ತಂತ್ರವನ್ನು ಅನುಸರಿಸುತ್ತಾರೆ. ಈ ನಿಟ್ಟಿನಲ್ಲಿ ಶಾಂತಿನಾಥ ದೇಸಾಯಿ ಅವರು ಬಹಳಷ್ಟು ಪ್ರಯೋಗಗಳನ್ನು ಮಾಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಶಾಂತಿನಾಥ ದೇಸಾಯಿಯವರು ತಮ್ಮ ಕೃತಿಗಳಲ್ಲಿ ವ್ಯಕ್ತಿಯ ಅಂತರಂಗದ ಅನ್ವೇಷಣೆಗೆ ಒತ್ತು ಕೊಟ್ಟು, ವ್ಯಕ್ತಿಯ ಆಸೆ–ನಿರಾಸೆಗಳನ್ನು, ಸುಖ–ದುಃಖಗಳನ್ನು, ಅನಾಥಪ್ರಜ್ಞೆ –ಏಕಾಕಿತನವನ್ನು, ಅಸಹಾಯಕತೆಯನ್ನು ಹಿಂದಿನವರಿಗಿಂತಲೂ ಭಿನ್ನವಾದ ನಿರೂಪಣ ವಿಧಾನದಲ್ಲಿ ವಿಶ್ಲೇಷಿಸಿರುವ ಬಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ತಾನು ಕೈಗೆತ್ತಿಕೊಂಡ ವಸ್ತು ಓದುಗನ ಮನಸ್ಸನ್ನು ಮುಟ್ಟುವಂತೆ ಅದನ್ನು ಪರಿಣಾಮಕಾರಿಯಾಗಿ ನಿರೂಪಿಸುವುದೇ ತಂತ್ರ. ಕಾದಂಬರಿಕಾರ ಅಳವಡಿಸುವ ತಂತ್ರ, ಅನುಸರಿಸುವ ಮಾರ್ಗ ಕಾದಂಬರಿಯ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸುತ್ತದೆ. "ಕಾದಂಬರಿಕಾರ ಕಥೆ, ಸ್ಥಳ, ಕಾಲಗಳ ಸಾಂಗತ್ಯದಿಂದ ಉಂಟುಮಾಡಿದ ಭಾವಗಳು ಹೆಚ್ಚು ಪರಿಣಾಮ ಬೀರುವುದು ಅವನ ತಂತ್ರದ ಆಯ್ಕೆಯಿಂದ ಎನ್ನುತ್ತಾನೆ ವರ್ಸಿಲಾಬಕ್"[1]. ಕಾದಂಬರಿಗಳಿದ್ದಷ್ಟೇ ತಂತ್ರಗಳು ಇರಬಹುದು. "ಪ್ರತಿಯೊಬ್ಬ ಮಹಾನ್ ಕಲಾಕಾರ ತನ್ನದೇ ನಿರೂಪಣ ವಿಧಾನ ಕೈಗೆತ್ತಿಕೊಳ್ಳುತ್ತಾನೆ. ಕಲಾ ಕೃತಿಗಳ ವಸ್ತು ಹೇಗೆ ವೈವಿಧ್ಯಪೂರ್ಣವೋ ಹಾಗೆಯೇ ಅವನ ತಂತ್ರ ಕೂಡ"[2] ಎನ್ನುವುದು ಟಾಲ್ಸ್ಟಾಯ್‌ನ ಖಚಿತ ನಿಲುವು.

ಒಂದು ತಂತ್ರ ತನ್ನ ವಸ್ತುವಿನ ಕೆಲವು ಭಾಗಗಳನ್ನು ಮಾತ್ರ ಪ್ರಕಟಿಸಿ ಇನ್ನೂ ಅನೇಕ ಸಾಧ್ಯತೆಗಳ ಮೇಲೆ ಮುಸುಕು ಹಾಕಿಬಿಡಬಹುದು ಅಥವಾ ಉತ್ತಮ ವಸ್ತುವಿದ್ದೂ ತಂತ್ರದ ದೌರ್ಬಲ್ಯದಿಂದಾಗಿ ಅದು ಪರಿಣಾಮಕಾರಿಯಾಗದೆ ಹೋಗಬಹುದು. ಇಂಥ ಪ್ರಸಂಗಗಳಲ್ಲಿ ಕೃತಿಯ ಯಶಸ್ಸು ಸೀಮಿತವಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿಯೇ ಒಂದು ವಸ್ತುವಿನ ಸಂಕೀರ್ಣ ಸೂಕ್ಷ್ಮ ಸಾಧ್ಯತೆಗಳನ್ನೆಲ್ಲ ಅನಾವರಣಗೊಳಿಸಬಲ್ಲ ತಂತ್ರಕ್ಕಾಗಿ ಪ್ರತಿಯೊಂದು ಕಾದಂಬ–ರಿಯಲ್ಲಿಯೂ ಹೊಸದಾಗಿ ಶೋಧಿಸಬೇಕಾಗುತ್ತದೆ. ಯಾವುದೇ ಒಂದು ತಂತ್ರ ಎಲ್ಲ ಬಗೆಯ ವಸ್ತುಗಳಿಗೂ ಸಿದ್ಧ ತಂತ್ರವಾಗಲಾರದು.

ಒಟ್ಟಿನಲ್ಲಿ ಯಾವ ರೀತಿ ಹೇಳಿದರೆ ವಸ್ತುವಿನ ಎಲ್ಲಾ ಸಾಧ್ಯತೆಗಳನ್ನು ಸರಿಯಾದ ರೀತಿಯಲ್ಲಿ ದುಡಿಸಿಕೊಳ್ಳಲು ಸಾಧ್ಯ ಎಂದು ಲೇಖಕ/ಲೇಖಕಿ ಹಲವಾರು

ಬಾರಿ ಯೋಚಿಸಬೇಕಾಗುತ್ತದೆ. ಇದು ಸಹಜತೆಗಿಂತ ಕೃತಿಯ ಅಗತ್ಯತೆಯ ಪ್ರಶ್ನೆ. ಏಕೆಂದರೆ ವಸ್ತುವಿಗೆ ತಕ್ಕ ತಾಂತ್ರಿಕ ಅವಕಾಶಗಳು ಇಲ್ಲದಿದ್ದರೆ ಅದು ತನ್ನ ಪರಿಪೂರ್ಣ ಅರ್ಥವನ್ನು ಬಿಟ್ಟು ಕೊಡುವುದಿಲ್ಲ.

**ಶಾಂತಿನಾಥ ದೇಸಾಯಿ ಅವರ ಕಾದಂಬರಿಗಳ ವಸ್ತು:**

ವಸ್ತುವಿನ ಆಯ್ಕೆಯ ಮೂಲಕವೇ ಒಬ್ಬ ಲೇಖಕನ ಜೀವನದೃಷ್ಟಿ ಹಾಗೂ ಮನೋಧರ್ಮವನ್ನು ತಿಳಿಯುವುದು ಸಾಧ್ಯವಾಗುತ್ತದೆ. ಆಯ್ಕೆ ಮಾಡಿಕೊಂಡ ವಸ್ತುವಿನ ನಿರೂಪಣೆಯ ಮೂಲಕ ಆತ ತನ್ನ ಜೀವನ ದೃಷ್ಟಿಯನ್ನು ಮತ್ತಷ್ಟು ವಿವರವಾಗಿ, ಸೌಂದರ್ಯಾತ್ಮಕವಾಗಿ, ಹೆಚ್ಚು ಪರಿಣಾಮಕಾರಿಯಾಗಿ ತಿಳಿಸಿಕೊಡುತ್ತಾನೆ.

ಶಾಂತಿನಾಥ ದೇಸಾಯಿಯವರು ಪ್ರಮುಖವಾಗಿ ಮನುಷ್ಯನ ಅಸ್ತಿತ್ವದ ಹುಡುಕಾಟ, ಮುಕ್ತಿಯ ಹಂಬಲ, ಆಧುನಿಕತೆಯ ಯಾಂತ್ರಿಕತೆಯಲ್ಲಿ ವಿಕ್ಷಿಪ್ತಗೊಳ್ಳುವ ಯುವಕರ ಮನಸ್ಸು, ಸಂಬಂಧಗಳ ಅಗತ್ಯತೆ, ಗಂಡು – ಹೆಣ್ಣಿನ ಸಂಬಂಧದ ಸ್ವರೂಪ, ವೈಯಕ್ತಿಕ ಹುಡುಕಾಟದೊಂದಿಗೆ ಮನುಷ್ಯ ಸಾಮಾಜಿಕತೆಯೊಂದಿಗೆ ಬೆಸೆದುಕೊಳ್ಳುವ ರೀತಿ, ವ್ಯಕ್ತಿಯ ಅಂತರಾಳದ ಮೂಲಕ ವ್ಯಕ್ತಿತ್ವ ಹಾಗೂ ತತ್ವಗಳು ಮಂಥನಗೊಳ್ಳುವ ಬಗೆ – ಈ ವಸ್ತುಗಳನ್ನು ತಮ್ಮ ಕಾದಂಬರಿಗಳ ರಚನೆಯಲ್ಲಿ ಬಳಸಿಕೊಂಡಿದ್ದಾರೆ. ಇವರ ಕಾದಂಬರಿಯ ವಸ್ತುಗಳು ಸೂಕ್ಷ್ಮ ಸಂವೇದನೆಯ ಓದುಗರನ್ನು ಆಳವಾಗಿ ಪ್ರಭಾವಿಸಬಲ್ಲವು. ಆಧುನಿಕತೆಯ ಪರಿಧಿಯಲ್ಲಿ ಬದುಕುತ್ತಿರುವ ನಮಗೆ ಇಂದು ದೇಸಾಯಿಯವರ ಕಾದಂಬರಿಯ ವಸ್ತುಗಳು ನಾವು ಅಥವಾ ನಮ್ಮ ಸುತ್ತಲಿನ ವ್ಯಕ್ತಿಗಳು ಅನುಭವಿಸುತ್ತಿರುವ ಯಾತನೆ, ಬೇಸರ, ಗೊಂದಲ, ಭ್ರಮನಿರಸನ, ಅಸಹಾಯಕತೆ ಇವುಗಳಿಗೆ ಹಿಡಿದ 'ಕಲಾತ್ಮಕವಾದ ಕನ್ನಡಿ' ಎಂದು ಅನಿಸಿದರೆ ಅದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ.

ದೇಸಾಯಿ ಅವರ ಮೊದಲ ಕಾದಂಬರಿ 'ಮುಕ್ತಿ' ಮನುಷ್ಯನ ಅದರಲ್ಲಿಯೂ ದುರ್ಬಲ ಮನಸ್ಸಿನ ಸೂಕ್ಷ್ಮಪ್ರಜ್ಞೆಯ ಆಧುನಿಕ ಯುವಕರ ಮುಕ್ತಿಯ ಹಂಬಲ ಹಾಗೂ ಅದನ್ನು ಸಾಧಿಸುವ ನಿರಂತರ ಪ್ರಯತ್ನದ ವಸ್ತುವನ್ನು ಒಳಗೊಂಡಿದೆ. 'ವಿಕ್ಷೇಪ' ಕಾದಂಬರಿಯ ವಸ್ತು ಆಧುನಿಕ ಜಗತ್ತಿನಲ್ಲಿ ಸಂವೇದನಾಶೀಲ ತರುಣ ಜನಾಂಗ ಎದುರಿಸುತ್ತಿರುವ ಮುಖ್ಯ ಸಮಸ್ಯೆಯನ್ನು ಕುರಿತದ್ದು. ಬದುಕಿನಲ್ಲಿ ನಿರ್ದಿಷ್ಟ ಗುರಿ ಇಲ್ಲದ ಅನವಸ್ಥೆ, ಒಂದು ಅನುಭವದಿಂದ ಮತ್ತೊಂದಕ್ಕೆ ಜಾರಿಕೊಳ್ಳುತ್ತಾ ಯಾವ ಸಂಬಂಧದಲ್ಲಿಯೂ ಅರ್ಥ ಕಾಣದೆ ಎಲ್ಲಿಯೂ ನೆಲೆ ನಿಲ್ಲದೆ ತೊಳಲಾಡುವ ಯುವಕರ ವಿಕ್ಷಿಪ್ತ ಮನಸ್ಥಿತಿಯನ್ನು ಈ ಕಾದಂಬರಿ

ಚಿತ್ರಿಸುತ್ತದೆ. ವೈಯಕ್ತಿಕ ಸಂಬಂಧಗಳ ಮೂಲಕ ಜೀವನವನ್ನು ಶೋಧಿಸುವ ವಸ್ತುವನ್ನು ಒಳಗೊಂಡ ಕಾದಂಬರಿ 'ಸಂಬಂಧ'. ಇದರಲ್ಲಿ ದೇಸಾಯಿ ಅವರು ಗಂಡು– ಹೆಣ್ಣಿನ ಸಂಬಂಧದ ವಿವಿಧ ಸಾಧ್ಯತೆಗಳನ್ನು ಶೋಧಿಸಿರುವುದಲ್ಲದೆ, ಆಧುನಿಕತೆಯು ತಂದೊಡ್ಡುವ ಒತ್ತಡಗಳನ್ನು ಅರಗಿಸಿಕೊಂಡು ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಹೆಣ್ಣಿಗೆ ಮಾತ್ರ ಸಾಧ್ಯ ಎಂದು ಹೇಳುತ್ತಿರುವಂತಿದೆ.

ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧ ಹಾಗೂ ಅವೆರಡೂ ಪರಸ್ಪರ ಪೂರಕ– ಪ್ರೇರಕವಾಗಿರುವ ಬಗೆಯನ್ನು 'ಬೀಜ' ಕಾದಂಬರಿ ತಿಳಿಸುತ್ತದೆ. ಯಾವ ಬೀಜ ಎಲ್ಲಿ ಬೇಕಾದರೂ ಮೊಳೆಯಲು ಸಾಧ್ಯವೇ? ಎಂಬ ಪ್ರಶ್ನೆಯಿಂದ ಆರಂಭವಾಗುವ ಕಾದಂಬರಿ ಮುಂದುವರೆದಂತೆಲ್ಲ ಈ ಪ್ರಶ್ನೆಗೆ ಉತ್ತರಿಸುತ್ತಿರುವಂತೆ ಕಂಡು ಬರುತ್ತದೆ. ತತ್ವಗಳು ಹಾಗೂ ವ್ಯಕ್ತಿತ್ವಗಳ ಶೋಧನೆ ಹಾಗೂ ವಿಮರ್ಶೆ 'ಅಂತರಾಳ' ಕಾದಂಬರಿಯ ವಸ್ತು. ವಿಕ್ರಮ ತನ್ನ ಅಂತರಾಳವನ್ನು ಪರೀಕ್ಷೆಗೆ ಒಳಪಡಿಸುವುದರ ಜೊತೆ ಜೊತೆಗೆ ತಾನು ಮತ್ತು ಸಮಾಜ ನಂಬಿದ್ದ ತತ್ವಗಳನ್ನು ವಿಮರ್ಶೆಗೆ ಒಳಪಡಿಸುತ್ತಾನೆ. ಧರ್ಮ ಮತ್ತು ಪರಂಪರೆಯ ಚೌಕಟ್ಟಿನಲ್ಲಿ ಜೀವನದ ಅರ್ಥ ಹುಡುಕುವ ಹಾಗೂ ಧರ್ಮದ ಪೊಳ್ಳುತನವನ್ನು ಅರಿತು, ಅದರ ಗಟ್ಟಿ ತತ್ವಗಳನ್ನು ಮಾತ್ರ ಅಳವಡಿಸಿಕೊಳ್ಳುವ, ಇಂದಿನ ಅಗತ್ಯತೆಗೆ ಧರ್ಮವು ಉಳಿಯಬೇಕಾದರೆ ಎತ್ತರಕ್ಕೆ ಬೆಳೆಯಬೇಕಾದ ಅಗತ್ಯತೆಯನ್ನು ಅಂದರೆ ಹೊಸ ಕಾಲದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾದ ಬಗೆಯನ್ನು ಕುರಿತು ದೇಸಾಯಿ ಅವರ ಕೊನೆಯ ಕಾದಂಬರಿ 'ಓಂಣಮೋ' ಬೆಳಕು ಚೆಲ್ಲುತ್ತದೆ.

**ಶಾಂತಿನಾಥ ದೇಸಾಯಿ ಅವರ ಕಾದಂಬರಿಗಳ ತಂತ್ರ:**

ಕಾದಂಬರಿಯ ತಂತ್ರ ಅದರ ವಸ್ತುವನ್ನು ಆಧರಿಸಿರುತ್ತದೆ, ಏಕೆಂದರೆ ಒಂದು ವಸ್ತುವನ್ನು ಪರಿಣಾಮಕಾರಿಯಾಗಿ ಹೇಳಲು ಒಂದು ನಿರ್ದಿಷ್ಟ ವಿಧಾನದಿಂದ ಮಾತ್ರ ಸಾಧ್ಯ ಅದೇ ತಂತ್ರ. ವಸ್ತುವಿನ ಅಗತ್ಯಕ್ಕೆ ತಕ್ಕಂತೆ ಲೇಖಕರು ತಂತ್ರವನ್ನು ಅನುಸ–ರಿಸುತ್ತಾರೆ. ಇಲ್ಲದಿದ್ದರೆ ಲೇಖಕ ಹೇಳಬಯಸಿದ್ದೇ ಬೇರೆ, ಕೃತಿ ಹೇಳುವುದೇ ಬೇರೆ ಆಗಿಬಿಡುವ ಸಾಧ್ಯತೆಗಳಿವೆ. ದೇಸಾಯಿ ಅವರ ಕಾದಂಬರಿಗಳಲ್ಲಿ ಪ್ರಮುಖವಾಗಿ ಮೂರು ತಂತ್ರಗಳನ್ನು ಗುರುತಿಸಬಹುದು. ಪ್ರಜ್ಞಾಪ್ರವಾಹತಂತ್ರ, ದಿನಚರಿ ಬರೆಯುವ ತಂತ್ರ, ಪತ್ರಗಳ ಮೂಲಕ ಸಂಭಾಷಣೆ.

**ಪ್ರಜ್ಞಾಪ್ರವಾಹ ತಂತ್ರ:**

ಒಬ್ಬ ವ್ಯಕ್ತಿಯಲ್ಲಿ ಪ್ರಜ್ಞೆಯು ಭೂತ, ವರ್ತಮಾನ ಮತ್ತು ಭವಿಷ್ಯದ ವಿಚಾರಗಳ ಮಿಶ್ರಣದಿಂದ ಕೂಡಿರುತ್ತದೆ. ವ್ಯಕ್ತಿಯ ಬೌದ್ಧಿಕ ಪ್ರವಾಹವು ಪ್ರಜ್ಞೆಯ

ಮೂಲಕ ಹರಿಯುತ್ತಿರುತ್ತದೆ. ಅದಕ್ಕೆ ಕಾಲಮಿತಿ ಇರುವುದಿಲ್ಲ. ಆತ ನೋಡುವ ಘಟನೆಗಳ ಆಧಾರದಿಂದ ಅವನಲ್ಲಿ ಹೊಸ ಗ್ರಹಿಕೆಗಳು ಉಂಟಾಗುತ್ತವೆ. ಅವುಗಳ ಆಧಾರದ ಮೇಲೆ ಮನಸ್ಸು ಪ್ರತಿಕ್ರಿಸುತ್ತಾ ಹೋಗುವ ಗೊಂದಲಮಯ ಮಾನಸಿಕ ವಾತಾವರಣದ ಸ್ಥಿತಿಯೇ ಪ್ರಜ್ಞಾಪ್ರವಾಹ.

ಕಾದಂಬರಿಯಲ್ಲಿ ಈ ತಂತ್ರದ ಬಳಕೆಯ ಉದ್ದೇಶವನ್ನು ಕುರಿತು ಓ. ಎಲ್. ನಾಗಭೂಷಣ ಸ್ವಾಮಿ ಅವರು "ಜಾಗೃತಪ್ರಜ್ಞೆ, ಪ್ರಜ್ಞಾಪೂರ್ವ ಸ್ಥಿತಿ, ಉಪಪ್ರಜ್ಞೆ ಮತ್ತು ಸುಪ್ತಪ್ರಜ್ಞೆಗಳ ಮಂಡನೆಯೇ ಪ್ರಜ್ಞಾಪ್ರವಾಹ ಕಾದಂಬರಿಗಳ ಉದ್ದೇಶ" ಎಂದು ಹೇಳುತ್ತಾರೆ.

ದೇಸಾಯಿ ಅವರ ಮೊದಲನೇ ಕಾದಂಬರಿ ಹಾಗೂ ಕನ್ನಡದ ಮೊದಲ ನವ್ಯ ಕಾದಂಬರಿಯಾದ ಮುಕ್ತಿ ಪ್ರಜ್ಞಾಪ್ರವಾಹ ತಂತ್ರವನ್ನು ಸಮರ್ಥವಾಗಿ ಬಳಸಿರುವ ಕೃತಿಯಾಗಿದೆ. ಕಾದಂಬರಿಯ ನಾಯಕ ಗೌರೀಶ ವರ್ತಮಾನದಲ್ಲಿ ನಿಂತು ಭೂತದ ಬಗ್ಗೆ ಭಯಪಡುತ್ತಾನೆ ಮತ್ತು ಭವಿಷ್ಯದ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಾನೆ ಇದೆಲ್ಲ ಏಕಕಾಲದಲ್ಲಿಯೇ ನಡೆಯುತ್ತಿರುತ್ತದೆ. ಇಡೀ ಕಾದಂಬರಿ ಇರುವುದೇ ಗೌರೀಶ ಧಾರವಾಡಕ್ಕೆ ಬಂದಂದಿನಿಂದ ನೈರೋಬಿಗೆ ಹೊರಡುವವರೆಗಿನ ಕಾಲದಲ್ಲಿ ಗೌರೀಶ ನಡೆಸುವ ಭೂತಕಾಲದ ವಿಶ್ಲೇಷಣೆಯಲ್ಲಿ. ಅಮೂರರು ಗುರುತಿಸುವ ಹಾಗೆ "ಮುಕ್ತಿ ಕಾದಂಬರಿಯಲ್ಲಿ ಗೌರೀಶನ ಮನಸ್ಸಿನ ವ್ಯಾಪಾರಗಳೇ ಮುಖ್ಯ ವಸ್ತು. ಗೌರೀಶನ ಕಾಳಜಿಗಳಿಗೆ ಹೊರತಾದ ಬಾಹ್ಯ ಜಗತ್ತೇ ಈ ಕಾದಂಬರಿಯಿಂದ ಸಂಪೂರ್ಣ ಮಾಯವಾಗಿ ಬಿಡುತ್ತದೆ. ಕೈಗೆ ಸಿಕ್ಕುವಷ್ಟು ವಾಸ್ತವವೂ ಕೂಡ ಗೌರೀಶನ ಪ್ರಜ್ಞೆಯಲ್ಲಿಯೇ ಸೋಸಿ ಬಂದದ್ದು".

ಪ್ರಜ್ಞಾಪ್ರವಾಹ ತಂತ್ರ ಕನ್ನಡ ನವ್ಯ ಕಾದಂಬರಿಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿದೆಯಾದರೂ ಇದರ ಬಳಕೆ ಹೆಚ್ಚಾಗಿ ಕಂಡುಬರುವುದಿಲ್ಲ. ಇಂಗ್ಲಿಷ್ ಸಾಹಿತ್ಯದಂತೆ ಕನ್ನಡದಲ್ಲಿ ಪ್ರಜ್ಞಾಪ್ರವಾಹ ತಂತ್ರವು ಒಂದು ಪ್ರಮುಖ ನಿರೂಪಣಾ ತಂತ್ರವಾಗಿ ಬೆಳೆಯಲಿಲ್ಲ ಎಂದೇ ಹೇಳಬಹುದು. ಆದರೆ ಶಾಂತಿನಾಥ ದೇಸಾಯಿ ಅವರು ಈ ತಂತ್ರವನ್ನು ತಮ್ಮ ಮುಕ್ತಿ ಕಾದಂಬರಿಯಲ್ಲಿ ಅತ್ಯಂತ ಯಶಸ್ವಿಯಾಗಿ ಸಾಧಿಸಿದ್ದಾರೆ. ಅವರ ಉಳಿದ ಕಾದಂಬರಿಗಳ ಪಾತ್ರಗಳು ಸಂಪೂರ್ಣವಾಗಿ ಅಲ್ಲದಿದ್ದರೂ ಕೂಡ, ಒಂದು ಸೀಮಿತ ನೆಲೆಯಲ್ಲಿ ಪ್ರಜ್ಞಾಪ್ರವಾಹಕ್ಕೆ ಒಳಗಾಗುವುದನ್ನು ನಾವು ಗುರುತಿಸಬಹುದು. ಅತ್ಯಂತ ಖಾಸಗಿ ಸಮಸ್ಯೆಗಳು ಹಾಗೂ ವಿಷಯಗಳನ್ನು ತಮ್ಮ ಕಾದಂಬರಿಯ ವಸ್ತುವಾಗಿಸಿದ ದೇಸಾಯಿಯವರು ಅವುಗಳ ನಿರೂಪಣೆಗೆ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿರುವುದು ಸಮಂಜಸ ಎನಿಸುತ್ತದೆ.

**ದಿನಚರಿ ಬರೆಯುವ ತಂತ್ರ:**

ಶಾಂತಿನಾಥ ದೇಸಾಯಿ ಅವರ ಮತ್ತೊಂದು ನಿರೂಪಣಾ ತಂತ್ರವೆಂದರೆ ಆತ್ಮಚರಿತ್ರಾತ್ಮಕ ಅಥವಾ ಆತ್ಮಕಥನಾತ್ಮಕ ಮಾದರಿಯ ಬಳಕೆ. ಇವರ ಕಾದಂಬ–ರಿಯ ಬಹುತೇಕ ಎಲ್ಲಾ ಕೇಂದ್ರ ಪಾತ್ರಗಳು ತಮ್ಮ ಜೀವನದ ಯಾವುದೋ ಒಂದು ಘಟ್ಟದಲ್ಲಿ ಆತ್ಮಚರಿತ್ರೆಯನ್ನು ಅಥವಾ ದಿನಚರಿಯನ್ನು ಬರೆಯಲು ಪ್ರಾರಂಭಿಸುವುದು ಅಥವಾ ಇಲ್ಲಿಯವರೆಗಿನ ಜೀವನವನ್ನು ಕುರಿತು ವಿಶ್ಲೇಷಿಸುವುದನ್ನು ಕಾಣಬಹುದು. ಅತ್ಯಂತ ಸೂಕ್ಷ್ಮ ಸಂವೇದನೆಯ ವ್ಯಕ್ತಿಯ ಖಾಸಗಿ ಸಮಸ್ಯೆಗಳೇ ದೇಸಾಯಿ ಅವರ ಕಾದಂಬರಿಗಳ ವಸ್ತುವಾದ ಕಾರಣ ಈ ತಂತ್ರ ಹೆಚ್ಚು ಪರಿಣಾಮಕಾರಿಯಾಗಿದೆ.

ಮನುಷ್ಯನ ಖಾಸಗಿ ಪ್ರಶ್ನೆಗಳಿಗೆ ಸಾಮಾನ್ಯ ಅಥವಾ ಸಾರ್ವಜನಿಕ ಉತ್ತರಗಳಾಗಲೀ; ಖಾಸಗಿ ಸಮಸ್ಯೆಗಳಿಗೆ ಸಾಮಾನ್ಯ ಅಥವಾ ಸಾರ್ವಜನಿಕ ಪರಿಹಾರಗಳಾಗಲೀ ಇರುವುದಿಲ್ಲ. ಅದು ಆ ವ್ಯಕ್ತಿಯ ಸಂವೇದನೆ, ಪರಿಸ್ಥಿತಿ ಹಾಗೂ ಪರಿಸರವನ್ನು ಆಧರಿಸಿ ಭಿನ್ನವಾಗುತ್ತದೆ. ಅಲ್ಲದೆ ತನ್ನ ಅನುಭವವನ್ನು ತಾನು ಹೇಳುವಷ್ಟು ಖಚಿತವಾಗಿ, ನಿಖರವಾಗಿ ಮತ್ತೊಬ್ಬರು ಹೇಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ದೇಸಾಯಿಯವರ ಕಾದಂಬರಿಯ ಕೆಲವು ಕೇಂದ್ರ ಪಾತ್ರಗಳು ದಿನಚರಿ ಅಥವಾ ಆತ್ಮ ಚರಿತ್ರೆಯನ್ನು ಬರೆಯುವುದರ ಮೂಲಕ ತಮ್ಮ ಜೀವನ ಅನುಭವವನ್ನು ತಾವೇ ವಿಶ್ಲೇಷಿಸಿಕೊಳ್ಳುತ್ತಾರೆ.

ದಿನಚರಿ ಬರೆಯುವ ತಂತ್ರದ ಮತ್ತೊಂದು ಲಾಭವೆಂದರೆ ಇಲ್ಲಿನ ಕೇಂದ್ರ ಪಾತ್ರಗಳು ತಮ್ಮ ಅನುಭವಗಳನ್ನು ಬರೆಯಲು ತೊಡಗುವುದರ ಮೂಲಕ, ತಮ್ಮ ಗತ ಜೀವನದ ಘಟನೆಗಳನ್ನು ವರ್ತಮಾನದ ಬೆಳಕಿನಲ್ಲಿಟ್ಟು ಪರೀಕ್ಷಿಸುವುದರ ಮೂಲಕ, ಆತ್ಮವಿಮರ್ಶೆಗೆ ತೊಡಗುತ್ತಾರೆ. ಗೌರೀಶ ಹಾಗೂ ವಿಕ್ರಮನಲ್ಲಿ ಈ ಅಂಶವನ್ನು ನಿಚ್ಚಳವಾಗಿ ಗುರುತಿಸಬಹುದು.ಉಳಿದಂತೆ ರಾಹುಲ, ಶೀತಲಕುಮಾರ, ರಾಧಿಕೆ, ಶ್ರೇಯಾಂಸ ಇವರು ಸಾಂದರ್ಭಿಕವಾಗಿ ತಮ್ಮ ಗತವನ್ನು ವರ್ತಮಾನದಲ್ಲಿ ನೆನಪಿಸಿಕೊಳ್ಳುತ್ತಾ, ಕೆಲವೊಮ್ಮೆ ಆತ್ಮ ಸಮರ್ಥನೆಯಲ್ಲೂ, ಅನೇಕ ವೇಳೆ ಆತ್ಮವಿಶ್ಲೇಷಣೆ ಹಾಗೂ ಆತ್ಮವಿಮರ್ಶೆಯಲ್ಲಿ ತೊಡಗುವುದನ್ನು ಕಾಣುತ್ತೇವೆ.

**ಪತ್ರದ ಮೂಲಕ ಸಂಭಾಷಣೆ:**

ಕೆಲವು ಸೂಕ್ಷ್ಮ ಸನ್ನಿವೇಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಸಲುವಾಗಿ ದೇಸಾಯಿಯವರು ಅದನ್ನು ನೇರ ಸಂಭಾಷಣೆಯ ಸನ್ನಿವೇಶವಾಗಿ ಚಿತ್ರಿಸದೆ ಪತ್ರದ ಮೂಲಕ ಆ ಸಂದರ್ಭವನ್ನು ಹಿಡಿದಿಡುತ್ತಾರೆ. ಅದರಲ್ಲಿಯೂ ಸಂಬಂಧಗಳ ಬೆಳವಣಿಗೆ ವಿಷಯದಲ್ಲಿ ಈ ತಂತ್ರ ಹೆಚ್ಚು ಬಳಸಲ್ಪಟ್ಟಿದೆ.

ರಾಹುಲ ತಾನು ವಿದೇಶಕ್ಕೆ ತೆರಳುವ ಸಂದರ್ಭದಲ್ಲಿ ಕುಂದಾಳೊಂದಿಗಿನ ಸಂಬಂಧದ ಬಗ್ಗೆ ತನ್ನ ಅಭಿಪ್ರಾಯವನ್ನು ಹೇಳುವುದು ತಾನು ಬರೆದ ಪತ್ರದ ಮೂಲಕ, ಸಂಬಂಧ ಕಾದಂಬರಿಯಲ್ಲಿ ರಾಧಿಕೆ ಮತ್ತು ಶೀತಲಕುಮಾರರ ಸಂಬಂಧ ಹೆಚ್ಚು ಗಾಢವಾಗಲು ಪತ್ರ ವ್ಯವಹಾರವು ಸಹಾಯಕ್ಕೆ ಬರುತ್ತದೆ. ಶ್ರೇಯಾಂಸನು ರೇವತಿಗೆ ಪತ್ರವನ್ನು ಬರೆಯುವ ಮೂಲಕ ತನ್ನ ಮನಸ್ಸನ್ನು ಬಿಚ್ಚಿಡುತ್ತಾನೆ. ವಿಕ್ರಮನಿಗೆ ಅಶ್ವಿನಿ ಬರೆಯುವ ಪತ್ರ ಅವರಿಬ್ಬರ ಸಂಬಂಧದ ಆಳವನ್ನು, ಅಗಲಿಕೆಯ ನೋವು ಹಾಗೂ ಅನಿವಾರ್ಯತೆಯನ್ನು ಸಮರ್ಥವಾಗಿ ಹಿಡಿದಿಡುತ್ತದೆ. ಹೀಗೆ ಪತ್ರಗಳ ಬಳಕೆ ದೇಸಾಯಿ ಅವರ ಕಾದಂಬರಿಗಳಲ್ಲಿ ಸೂಕ್ಷ್ಮ ವಿಷಯಗಳನ್ನು ಸೂಕ್ಷ್ಮವಾಗಿಯೇ ಹೇಳಲು ಉಪಯುಕ್ತವಾಗಿದೆ.

ಉಳಿದೆಲ್ಲ ಕಾದಂಬರಿಗಳಿಗಿಂತ ಭಿನ್ನವಾದ ತಂತ್ರವನ್ನು ದೇಸಾಯಿಯವರು ತಮ್ಮ ಕೊನೆಯ ಕಾದಂಬರಿ ಓಂಣಮೋದಲ್ಲಿ ಅಳವಡಿಸಿಕೊಂಡಿದ್ದಾರೆ. ಇಲ್ಲಿ ಕಾದಂಬರಿಯ ಘಟನಾವಳಿಗಳ ನಡುವೆ ಲೇಖಕ ನಿರೂಪಕನಾಗಿ ಪ್ರವೇಶಿಸಿ ಕೆಲವು ವಿಚಾರಗಳನ್ನು ಹೇಳುವುದನ್ನು ಕಾಣುತ್ತೇವೆ. ಈ ತಂತ್ರದ ಮೂಲಕ ಲೇಖಕ ಓದುಗರೊಂದಿಗೆ ನೇರ ಸಂವಾದ ನಡೆಸಲು ಸಾಧ್ಯವಾಗುವುದರೊಂದಿಗೆ ಇಲ್ಲಿ ಕಾದಂಬರಿಯ ಲೇಖಕನೇ ವಿಮರ್ಶಕನ ಕಾರ್ಯವನ್ನು ಮಾಡುತ್ತಾನೆ. ಅಲ್ಲದೆ ಇದು ಒಂದು ಕಥನ ತಂತ್ರವೂ ಆಗಿದ್ದು ಕಾದಂಬರಿಗೆ ಅಗತ್ಯವಾದ ಕೆಲವು ವಿವರಣೆಗಳನ್ನು ಸಂಕ್ಷಿಪ್ತವಾಗಿ ನೀಡುವುದು ಸಾಧ್ಯವಾಗುತ್ತದೆ.

ಹೀಗೆ ದೇಸಾಯಿ ಅವರು ಆಧುನಿಕತೆ ಹಾಗೂ ನವ್ಯ ಮನೋಧರ್ಮವನ್ನು ಸಮರ್ಥವಾಗಿ ಅರಗಿಸಿಕೊಂಡು ತಮ್ಮ ಕಾದಂಬರಿಗಳನ್ನು ರಚಿಸಿದ್ದರೂ ಅನೇಕ ಪ್ರಯೋಗಗಳನ್ನು ಇವರ ಕಾದಂಬರಿಗಳಲ್ಲಿ ಕಾಣುವುದು ಸಾಧ್ಯವಿದೆ. ಕಾದಂಬರಿಯ ವಸ್ತು, ತಂತ್ರಗಳು ನವ್ಯ ಸಂದರ್ಭಕ್ಕೆ ಅನುಗುಣವಾಗಿ ಇರುವುದರಿಂದ ಇವುಗಳ ಮೂಲಕ ದೇಸಾಯಿ ಅವರ ಪ್ರತಿಭೆ ಹಾಗೂ ಜೀವನ ದೃಷ್ಟಿಯ ಪರಿಚಯ ಆಗುತ್ತದೆ.

**ಕೊನೆ ಟಿಪ್ಪಣಿಗಳು:**

1. ಡಾ. ಕೆ. ವಿಜಯಶ್ರೀ, ಕನ್ನಡ ನವ್ಯ ಕಾದಂಬರಿಗಳು (2002), ಶ್ರೀ ರಾಮಕ್ರಿಷ್ಣ ಪ್ರಕಾಶನ, ಪುಟ. 47.
2. ಡಾ. ಕೆ. ವಿಜಯಶ್ರೀ, ಕನ್ನಡ ನವ್ಯ ಕಾದಂಬರಿಗಳು (2002), ಶ್ರೀ ರಾಮಕ್ರಿಷ್ಣ ಪ್ರಕಾಶನ, ಪುಟ. 47.

**ಪರಾಮರ್ಶನ ಗ್ರಂಥಗಳು:**

1. ಮುಕ್ತ ಚಂದ (ಸಂ) (2001), ಡಿ. ವಿ. ಪ್ರಹಲ್ಲಾದ್, ಸಂಚಯ ಪ್ರಕಾಶನ.
2. ಶಾಂತಿನಾಥ ದೇಸಾಯಿ (2009), ಡಾ. ಪ್ರೀತಿ ಶುಭಚಂದ್ರ, ಡಾ. ಪ್ರಧಾನ ಗುರುದತ್ತ (ಸಂ), ನವಕರ್ನಾಟಕ ಪ್ರಕಾಶನ, ಬೆಂಗಳೂರು.
3. ಕನ್ನಡ ನವ್ಯ ಕಾದಂಬರಿಗಳು (2002), ಡಾ. ಕೆ. ವಿಜಯಶ್ರೀ, ಶ್ರೀ ರಾಮಕ್ರಿಷ್ಣ ಪ್ರಕಾಶನ.
4. ಸಮಗ್ರ ವಿಮರ್ಶೆ: ಸಂಪುಟ–2 (2015), ಗಿರಡ್ಡಿ ಗೋವಿಂದರಾಜು, ಸಪ್ನ ಬುಕ್ ಹೌಸ್, ಬೆಂಗಳೂರು.
5. ನವ್ಯ ಸಾಹಿತ್ಯ ದರ್ಶನ (2004), ಡಾ. ಶಾಂತಿನಾಥ ದೇಸಾಯಿ, ರಾಜ್ಯ ಕೇಂದ್ರ ಗ್ರಂಥಾಲಯ.
6. ಪ್ರಜ್ಞಪ್ರವಾಹತಂತ್ರ (1989), ಓ. ಎಲ್. ನಾಗಭೂಷಣಸ್ವಾಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.